# ತ್ರಿಕೋನ ಸ್ನೇಹದಲ್ಲಿ ಪ್ರೇಮ ಪಲ್ಲಟ!

**ಪವನ್ ರವೀಂದ್ರ**
**ಉದಯದ 'ಕಾವ್ಯಾಂಜಲಿ'ಯ ಸುಶಾಂತ್ ಅರಸ್**

◆ **ನೀವು ನಟರಾಗಿದ್ದು ಹೇಗೆ?**

ಬೆಂಗಳೂರಿನ ಕ್ರೈಸ್ಟ್ ಕಾಲೇಜಿನಲ್ಲಿ ಪಿಯು ಓದಿದೆ. ನಾಗರಭಾವಿಯ ಅಂಬೇಡ್ಕರ್ ಕಾಲೇಜಿನಲ್ಲಿ ಎಂಜಿನಿಯರಿಂಗ್ (ಇಂಡಸ್ಟ್ರಿಯಲ್ ಮ್ಯಾನೇಜ್‌ಮೆಂಟ್) ಎರಡನೇ ವರ್ಷದಲ್ಲಿ ಇದ್ದಾಗಲೇ ಪ್ರಸಾದ್ ಬಿದ್ದಪ್ಪ ಅವರ ಮಾಡೆಲಿಂಗ್ ತಂಡದಲ್ಲಿ ಅವಕಾಶ ಸಿಕ್ಕಿತು. ಅದೇ ಸಂದರ್ಭದಲ್ಲಿ 'ಜಾನಕಿ ರಾಘವ'ದಲ್ಲಿ ನಟಿಸುವ ಮೂಲಕ ಕಿರುತೆರೆಗೆ ಪರಿಚಯ ಆದೆ. ನಂತರ 'ಏಟು ಎದುರೇಟು', 'ರಂಗನಾಯಕಿ' ಮಾಡಿದೆ. ಇದು ನನಗೆ ಭಿನ್ನ ಇಮೇಜ್ ತಂದುಕೊಟ್ಟಿತು. ತೆಲುಗಿನಲ್ಲಿ 'ಮೌನರಾಗಂ' ಮಾಡ್ತಾ ಇದ್ದೇನೆ. ಉದಯದ 'ಕಾವ್ಯಾಂಜಲಿ' ಆಡಿಷನ್‌ಗೆ ಕರೆ ಬಂತು. ಈ ಪಾತ್ರಕ್ಕೆ ನಾನೇ ಸೂಟ್ ಆಗ್ತೀನಿ ಅನ್ನುವ ಅಭಿಪ್ರಾಯ ವ್ಯಕ್ತವಾದ ಹಿನ್ನೆಲೆಯಲ್ಲಿ ಈ ಪಾತ್ರಕ್ಕೆ ಬಣ್ಣ ಹಚ್ಚಿದೆ.

◆ **ಸುಶಾಂತ್‌ನ ಶಿಕ್ಷಣಕ್ಕೆ ಸಂಬಂಧಿಸಿದ ತರ್ಕ ಹೇಗೆನಿಸುತ್ತದೆ?**

ಸುಶಾಂತ್ ಶ್ರೀಮಂತ ಮನೆತನದವನು. ಅವನಿಗೆ ಅವನದೇ ಆದ ಆಸಕ್ತಿಗಳು ಇವೆ. ತನ್ನ ತಾಯಿ, ತನ್ನ ಪ್ರೀತಿಯ ಸಂಗೀತ ಮತ್ತು ಇಷ್ಟಪಟ್ಟ ಪ್ರೇಯಸಿ ಇದ್ದರೆ ಸಾಕು. ಉಳಿದಂತೆ ಯಾವ ಬಯಕೆಗಳೂ ಅವನಿಗೆ ಇಲ್ಲ. ಎಲ್ಲರೂ ಖುಷಿಯಾಗಿರಬೇಕು ಎನ್ನುವ ಮನೋಭಾವದ ಹುಡುಗ. ಓದಿನ ಬಗ್ಗೆ ಅವನಿಗೆ ತಕರಾರುಗಳಿವೆ. ವರ್ಷಪೂರ್ತಿ ಬೇರೆ ಬೇರೆ ಶಿಕ್ಷಕರು ಹೇಳಿಕೊಡುವುದುನ್ನು ಮೂರೇ ಗಂಟೆಯಲ್ಲಿ ಒಬ್ಬ ವಿದ್ಯಾರ್ಥಿ ಹೇಗೆ ಹೇಳಬೇಕು? ಆ ಮೂಲಕ ವಿದ್ಯಾರ್ಥಿಗಳ ಅರಿವನ್ನು ಗುರ್ತಿಸಲು ಸಾಧ್ಯವೆ? ಎನ್ನುವ ಪ್ರಶ್ನೆಗಳನ್ನು ಆತ ಆಗಾಗ ಕೇಳುತ್ತಲೇ ಇರುತ್ತಾನೆ. ಅವನಿಗೆ ಖುಷಿ ಕೊಡುವುದನ್ನು ಮಾಡಬೇಕು. ಸಂತೋಷ ಇರಲಿ, ನೋವೇ ಬರಲಿ ಎಲ್ಲವನ್ನೂ ತನ್ನ ಸಂಗೀತದಲ್ಲಿ ನೋಡಲು ಬಯಸುತ್ತಾನೆ. ಅವನಿಗೆ ತನ್ನ ತಾಯಿ ಮೇಲೆ ತುಂಬ ಹೆಮ್ಮೆ ಮತ್ತು ಪ್ರೀತಿ. ಬಿಟ್ಟರೆ ಪ್ರೇಯಸಿ ಕಾವ್ಯಾ. ಆಕೆಯನ್ನು ಮೊದಲ ನೋಟದಲ್ಲಿಯೇ ಮೆಚ್ಚಿದ್ದಾನೆ. ಇವನ್ನು ಬಿಟ್ಟರೆ ಜಗತ್ತಿನ ಯಾವ ಸುಖದ ಮೇಲೂ ಅವನಿಗೆ ಮೋಹವಿಲ್ಲ. ಬೇರೆ ಸಂಗತಿ ವ್ಯಕ್ತಿಗಳನ್ನು ಅಷ್ಟು ಹಚ್ಚಿಕೊಳ್ಳುವುದಿಲ್ಲ. ಅವನಿಗೆ ಯಾವ ಟೆನ್ಷನ್ ಕೂಡ ಇಲ್ಲ. ಮನೆಯವರೂ ಅವನನ್ನು ಅಷ್ಟು ಗಂಭೀರವಾಗಿ ತೆಗೆದುಕೊಂಡಿಲ್ಲ. ಮನೆಯಲ್ಲಿ ಏನಾದರೂ ತೀರ್ಮಾನ ತೆಗೆದುಕೊಳ್ಳುವಾಗ ಕೂಡ ಅವನಿಗೆ ಮಾನ್ಯತೆ ಇರುವುದಿಲ್ಲ. ತಂದೆಗೂ ಸುಶಾಂತ್ ಎಂದರೆ ಅಷ್ಟಕ್ಕಷ್ಟೆ. ಅಪ್ಪ ರೇಗಾಡಿದರೂ ಆತ ತಲೆಕೆಡಿಸಿಕೊಳ್ಳುವುದಿಲ್ಲ. ಅಪ್ಪನಿಗೆ ಕಷ್ಟ ಕೊಡುವುದು ಬೇಡ ಎನ್ನುವ ಭಾವನೆ ಅವನದು. ಎಲ್ಲದನ್ನೂ ಪಾಸಿಟಿವ್ ಆಗಿ ನೋಡುತ್ತಾನೆ.

◆ **ಕಾವ್ಯಾ ಸುಶಾಂತನ ಮೇಲೆ ಸಿಡುಕುವುದು ಎಷ್ಟು ಸರಿ?**

ಕಾವ್ಯಾಳಿಗೆ ಸುಶಾಂತನ ಗಿಟಾರ್ ಆಸಕ್ತಿ ಇಷ್ಟ ಆಗಲ್ಲ. 'ಅದೇನೂ ಪಿಟಿಲು ಬಾರಿಸುತ್ತೀಯಾ' ಎಂದು ಕಿಚಾಯಿಸುತ್ತಾಳೆ. ಆದರೆ ಅವನಿಗೆ ಒಂದಲ್ಲ ಒಂದು ದಿನ ನನ್ನ ಕಲೆ ಅವಳಿಗೆ ಇಷ್ಟ ಆಗುತ್ತದೆ ಎನ್ನುವ ಭರವಸೆ ಇದೆ. ಕಾವ್ಯಾಳ ಗೆಳತಿ ಅಂಜಲಿ ಸಿಂಗಪುರದಿಂದ ಬೆಂಗಳೂರಿಗೆ ಮರಳಿ ಬಂದಿದ್ದಾಳೆ. ಅವಳ ಜೊತೆ ಸುಶಾಂತ್‌ಗೂ ಸಲಿಗೆ ಬೆಳೆದಿದೆ. ತ್ರಿಕೋನ ಸ್ನೇಹದಲ್ಲಿ ಪ್ರೇಮ ಪಲ್ಲಟ ಆಗಬಹುದಾ ಗೊತ್ತಿಲ್ಲ.

ಆದರೆ ಸುಶಾಂತ್‌ಗೆ ಟ್ಯೂನ್ ಒಂದನ್ನು ಪೂರ್ಣ ಮಾಡಲು ತುಂಬ ದಿನಗಳಿಂದ ಆಗುವುದೇ ಇಲ್ಲ. ಏಕೆಂದರೆ ಯಾವುದೋ ಹುಡುಗಿಯ ಭಾವ



ಅವನ ತಲೆಯಲ್ಲಿ ಓಡುತ್ತಿರುತ್ತದೆ. ಕಾವ್ಯಾ ಎಂದುಕೊಳ್ಳುತ್ತಾನೆ. ಆದರೆ ಆಕೆ ಕಾವ್ಯಾ ಅಲ್ಲ. ಹೇಗೆ ಟ್ಯೂನ್ ಮುಗಿಸುವುದು ಎನ್ನುವ ಚಿಂತೆ ಇದೆ. ಅಂಜಲಿ ನೋಡುತ್ತಿದ್ದ ಹಾಗೆ ಟ್ಯೂನ್ ನುಡಿಸುವ ಆಸೆ ಬರುತ್ತದೆ. ಅಂಜಲಿ ನಮ್ಮ ಪ್ರೀತಿಯನ್ನು ಭದ್ರಮಾಡಬೇಕು ಎನ್ನುವ ನಿಟ್ಟಿನಲ್ಲಿ ಮಧ್ಯ ಪ್ರವೇಶ ಮಾಡುತ್ತಾಳೆ. ಅಂಜಲಿಯಿಂದ ಕಾವ್ಯಾ ಒಂದಿಷ್ಟು ಬದಲಾಗುತ್ತಿದ್ದಾಳೆ ಎನ್ನುವ ಭಾವನೆ ಬರುತ್ತದೆ. ಅಷ್ಟರಲ್ಲಿ ಅಂಜಲಿಗೂ ನನ್ನ ಅಮ್ಮ ವೇದಾ ಅರಸ್‌ಗೂ ಮಾತಿನ ಚಕಮಕಿ ನಡೆಯುತ್ತದೆ. ಅಂಜಲಿ ನಮ್ಮ ಮನೆಗೆ ಬಂದಾಗ ಅಮ್ಮ ಕೆನ್ನೆಗೆ ಹೊಡೆಯುತ್ತಾರೆ. ಕಾವ್ಯಾ ತನ್ನ ಗೆಳತಿಗೆ ಮಾಡಿದ ಅವಮಾನದಿಂದ ಮತ್ತಷ್ಟು ಕುಪಿತಳಾಗುತ್ತಾಳೆ. ಇದೇ ಸಂದರ್ಭದಲ್ಲಿ ಕಾವ್ಯಾಳ ಮೇಲೆ ಸುಶಾಂತನಿಗೆ ಬೇಜಾರಾಗುತ್ತದೆ. ಅವಳನ್ನು ಬದಲಿಸಲು ಸಾಧ್ಯ ಇಲ್ಲ ಎನ್ನುವ ಭಾವನೆ ಬರುತ್ತಿದೆ. ತನ್ನ ಹುಡುಗಿಗೆ ಅಂಜಲಿಯಂತಹ ಮನಸ್ಸು ಇರಬೇಕಿತ್ತು ಎನ್ನುವ ವಿಚಾರ ತಲೆಯಲ್ಲಿ ಬಂದಿದೆ.

◆ **ಸುಶಾಂತ್ ಮತ್ತು ಪವನ್ ಇಬ್ಬರಿಗೂ ಹೋಲಿಸಿ ನೋಡಿದರೆ...**

ಇಬ್ಬರಲ್ಲಿ ಬಹುತೇಕ ಸಾಮ್ಯತೆ ಇದೆ. ವೈಯಕ್ತಿಕವಾಗಿ ಸಂಗೀತವನ್ನು ಕೇಳುವ ಆಸಕ್ತಿ ಇದೆ. ನುಡಿಸಲು ಬರುವುದಿಲ್ಲ. ನನಗೆ ಸುತ್ತಾಟ–ಪ್ರವಾಸ ಎಂದರೆ ತುಂಬ ಇಷ್ಟ. ಆತ ತಾಯಿಯನ್ನು ಮಾತ್ರ ತುಂಬ ಪ್ರೀತಿಸುತ್ತಾನೆ. ನನಗೆ ಕುಟುಂಬದ ಎಲ್ಲರ ಮೇಲೂ ಪ್ರೀತಿ ಇದೆ. ಉಳಿದಂತೆ ಸುಶಾಂತ್ ಅಂತೆಯೇ ಕೆಲವೊಂದು ವಿಚಾರ ಇವೆ. ಕೋಪದಲ್ಲಿ ಯಾರಿಗೂ ಏನನ್ನೂ ಹೇಳಬಾರದು. ಸಂತೋಷದಲ್ಲಿ ಇದ್ದಾಗ ಯಾವ ಭರವಸೆಯನ್ನು ನೀಡಬಾರದು ಎನ್ನುವ ತತ್ವವನ್ನು ಪಾಲಿಸುತ್ತಿದ್ದೇನೆ. ಎಲ್ಲರ ಜೊತೆ ಚೆನ್ನಾಗಿರಬೇಕು. ಸ್ವಾರ್ಥ ನಮ್ಮನ್ನು ಹಾಳುಮಾಡುತ್ತದೆ ಎನ್ನುವ ವಿಷಯದಲ್ಲಿ ಇಬ್ಬರಿಗೂ ವ್ಯತ್ಯಾಸವೇ ಇಲ್ಲ.

◆ **ಶಿಕ್ಷಣ ಬ್ರೇಕ್ ಮಾಡಿದೆ ಎಂದು ಅನ್ನಿಸಿದೆಯಾ?**

ನನಗಿನ್ನೂ 23 ವರ್ಷ. ಓದುವಾಗಲೇ ಕೆಲಸ ಶುರುಮಾಡಿದೆ. ಇನ್ನೂ ಎರಡು ವರ್ಷ ಸಮಯ ಇದೆ. ಜರ್ಮನಿಗೆ ಹೋಗಬೇಕು ಮರ್ಸಿಡಿಸ್ ಬೆಂಜ್ ಕಾರ್ ವಿನ್ಯಾಸ ಮಾಡಬೇಕು ಎನ್ನುವ ಆಸೆ ಇದೆ. ಅದಕ್ಕೆ ಇನ್ನೂ ಸಮಯ ಇದೆ. ಕೋವಿಡ್ ಕಾರಣಕ್ಕೆ ಮತ್ತೊಂದು ವರ್ಷ ಹೆಚ್ಚಿಗೆ ಕಾಲಾವಕಾಶ ಸಿಕ್ಕಿದೆ. ಅಭಿನಯದಲ್ಲೂ ಆಸಕ್ತಿ ಇದೆ. ಹೇಗೋ ಚೆನ್ನಾಗಿ ನಡೆದುಕೊಂಡು ಹೋಗುತ್ತಿದೆ. ಶೈಕ್ಷಣಿಕವಾಗಿ ಸಮರ್ಥವಾಗಿದ್ದೆ. ಜೊತೆಗೆ ಕ್ರೀಡೆಯಲ್ಲೂ ಹಿಂದೆ ಇರಲಿಲ್ಲ. ಹೊಸ ಭಾಷೆಯನ್ನು ಕಲಿಯುವುದೂ ನನಗೆ ಇಷ್ಟ.

■ **ರಾಘವೇಂದ್ರ ಕೆ.**